# ನೇರ ನಗದು ಯೋಜನೆ ( Direct Benefit Transfer DBT)

ಕೇಂದ್ರ ಸರ್ಕಾರದಿಂದದ ಜನಹಿತಕ್ಕಾಗಿ ಜಾರಿಯಾಗಿರುವ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ನೇರ ನಗದು ಯೋಜನೆಯು ಒಂದು. ಈ ಯೋಜನೆಯಿಂದ ಈಗಾಗಲೇ ಅನೇಕ ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. DBT ಯೋಜನೆಗೆ ಮೊದಲ ಹಂತವಾಗಿ ದೇಶದಲ್ಲಿ 43 ಜಿಲ್ಲೆಗಳನ್ನು ಪ್ರಾಯೋಗಿಕವಾಗಿ ಆಯ್ಕೆಮಾಡಿಕೊಂಡಿದ್ದು, ಕರ್ನಾಟಕದಲ್ಲಿ ಧಾರವಾಡ, ತುಮಕೂರು ಹಾಗೂ ಮೈಸೂರು ಜಿಲ್ಲೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಮೂರು ಜಿಲ್ಲೆಗಳಲ್ಲಿ ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ಇದರಲ್ಲಿ ಅಳವಡಿಸಲಾಗಿದೆ.

ಯೋಜನೆಯ ಉದ್ದೇಶಗಳು:

- ಸರ್ಕಾರಿ ಸವಲತ್ತುಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವುದು.
- ನಿಜವಾದ ಫಲಾನುಭವಿಗಳನ್ನು ಗುರುತಿಸಿ, ಅಂಥವರಿಗೆ ಸವಲತ್ತನ್ನು ನೀಡುವುದು.
- ಸರ್ಕಾರದಿಂದ ನಾಗರೀಕರಿಗೆ ವರ್ಗಾವಣೆಯಾಗುವ/ನೀಡುವ ಧನ ಸಹಾಯವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ತಲುಪಿಸುವುದು.
- ಹಣ ವರ್ಗಾವಣೆಯಾಗುತ್ತಿದ್ದ ದೋಷಗಳನ್ನು ನಿವಾರಿಸುವುದು( ಹಣ ದುರುಪಯೋಗ, ಮಧ್ಯವರ್ತಿಗಳ ಹಾವಳಿ ಫಲಾನುಭವಿಗಳಿಗೆ ಸುಳ್ಳು ಮಾಹಿತಿ ನೀಡುವುದು, ವಿಳಂಬ ನೀತಿ ಇತ್ಯಾದಿ)

ಸಾರ್ವಜನಿಕ ಶಿಕ್ಷಣ ಇಲಾಖೆ ಅಡಿಯಲ್ಲಿ 2 ಯೋಜನೆಗಳನ್ನು ನೇರ ನಗದು ಯೋಜನೆಗೆ ( DBT ) ಸೇರಿಸಲಾಗಿದೆ. ಅವುಗಳೆಂದರೆ,

- ಕೇಂದ್ರ ಸರ್ಕಾರ ಯೋಜಿತ ಹೆಣ್ಣು ಮಕ್ಕಳ ಪ್ರೋತ್ಸಾಹ ಧನ ಕಾರ್ಯಕ್ರಮ
  ( National Scheme of Incentive to Girls for Secondary Education, NSIGSE )
- ನ್ಯಾಷನಲ್ ಮೀನ್ಸ್ – ಕಮ್ – ಮೆರಿಟ್ ವಿದ್ಯಾರ್ಥಿ ವೇತನ ಯೋಜನೆ
  ( National Means - Cum – Merit Scholarship Scheme, NMMS )

ರಾಜ್ಯಾದ್ಯಂತ ಜಾರಿಯಾಗಿರುವ ಈ ಎರಡು ಯೋಜನೆಗಳ ಫಲಾನುಭವಿಗಳು ವಿದ್ಯಾರ್ಥಿಗಳಾಗಿರುತ್ತಾರೆ. ಈ ಯೋಜನೆಗಳ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದಿಂದ ನಗದು ಸಹಾಯ ನೀಡಲಾಗುತ್ತಿದೆ.ಇವರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ.

**DBT ಜಿಲ್ಲೆಗಳಲ್ಲಿ ಹಣ ವರ್ಗಾವಣೆ ಹೇಗೆ ?**

- 3 ಜಿಲ್ಲೆಗಳಲ್ಲಿ ಎಲ್ಲರಿಗೂ ಆಧಾರ್ ಸಂಖ್ಯೆಯನ್ನು ನೀಡಲಾಗಿದೆ ಪ್ರತಿ ಫಲಾನುಭವಿ ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ಹಾಗೂ ಆಧಾರ್ ಕಾರ್ಡ್ ವಿವರಗಳನ್ನು ಶಾಲೆಯ ಮೂಲಕ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗೆ ತಲುಪಿಸಬೇಕು ( ಶಾಲೆಯ ಮುಖ್ಯಸ್ಥರು ಹಾಗೂ ತಾಲ್ಲೂಕು ಹಂತದ ಶಿಕ್ಷಣಾಧಿಕಾರಿಗಳು ಈ ಕಾರ್ಯವನ್ನು ಮಾಡಬೇಕು )
- ಪ್ರತಿ ವಿದ್ಯಾರ್ಥಿಯ ಆಧಾರ್ ಹಾಗೂ ಬ್ಯಾಂಕ್ ಖಾತೆ ವಿವರಗಳನ್ನು dbtapp.gov.in website ನಲ್ಲಿ ಲಭ್ಯವಿರುವ 22 ಕಾಲಂಗಳಲ್ಲಿ ಡಾಟಾ ಎಂಟ್ರಿ ಮಾಡಬೇಕು ತಾಲ್ಲೂಕು ಹಂತದಲ್ಲಿ BEO ( Contributor, ) ಈ ಕೆಲಸ ನಿರ್ವಹಿಸಬೇಕು.
- Data Entry ಆದ ಮಾಹಿತಿ ಜಿಲ್ಲಾ ಹಂತಕ್ಕೆ ಬಂದು ಅಲ್ಲಿ DDPI ( Verifier ) ಕಛೇರಿಯಲ್ಲಿ ಪರಿಶೀಲನೆಗೆ ಒಳಪಟ್ಟು, ಲೀಡ್ ಬ್ಯಾಂಕ್ ನ ಸಹಾಯದಿಂದ ಸೀಡಿಂಗ್ ( Seeding ) ಆಗಿ ರಾಜ್ಯದ ಮೂಲಕ ಸಂಪೂರ್ಣ ಮಾಹಿತಿ ಕೇಂದ್ರ ಸರ್ಕಾರಕ್ಕೆ ವರ್ಗಾವಣೆಯಾಗುತ್ತದೆ.

3 ಜಿಲ್ಲೆಗಳ ಶಾಲೆ,ತಾಲ್ಲೂಕು ಹಾಗೂ ಜಿಲ್ಲಾ ಹಂತದಲ್ಲಿ NSIGSE ಹಾಗೂ NMMS ಫಲಾನುಭವಿಗಳನ್ನು ಗುರುತಿಸಿ, ಆಧಾರ್ ಹಾಗೂ ಬ್ಯಾಂಕ್ ವಿವರಗಳನ್ನು ಸಂಗ್ರಹಿಸಿ ನಿಗದಿತ ನಮೂನೆಯಲ್ಲಿ ಮಾಹಿತಿ ತುಂಬಿ ರಾಜ್ಯ ಹಂತಕ್ಕೆ ಕಳುಹಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ. ತಾಂತ್ರಿಕ ಸಲಹೆಗಳಿಗೆ ಜಿಲ್ಲಾ ಹಂತದ NIC ಅಧಿಕಾರಿಗಳನ್ನು ಹಾಗೂ ಲೀಡ್ ಬ್ಯಾಂಕ್ ಮ್ಯಾನೇಜರ್ ಗಳನ್ನು ಸಂಪರ್ಕಿಸುವುದು. ರಾಜ್ಯ ಹಂತದಲ್ಲಿ NSIGSE ಕಾರ್ಯಕ್ರಮದ ಸಲಹೆಗಳಿಗಾಗಿ, ಶ್ರೀ ಕನ್ನಯ್ಯ, Mob No: 9449874387 ( for NSIGSE ) ಹಾಗೂ NMMS ಸಲಹೆಗಳಿಗಾಗಿ ಡಾ.ಎಂ.ವಿ.ಕೃಷ್ಣಮೂರ್ತಿ, Mob No : 9480695458 ( for NMMS ) ರವರನ್ನು ಸಂಪರ್ಕಿಸುವುದು.

(P.O)